ಕರ್ನಾಟಕ ರಾಜ್ಯ ಪೊಲೀಸ್

# ಪ್ರಥಮ ವರ್ತಮಾನ ವರದಿ

(ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ 173 BNSS ರ ಕೆಳಗೆ )

ಘನ ನ್ಯಾಯಾಲಯ : III Addl. Chief Judicial Magistrate,Bengaluru City

1. ಜಿಲ್ಲೆ : Bengaluru City ವೃತ್ತ/ಉಪ ವಿಭಾಗ : Cubban Park Sub division ಪೊಲೀಸ್ ಠಾಣೆ : Vidhana Soudha PS

ಅಪರಾಧ ಸಂಖ್ಯೆ : 0116/2024 ಪ್ರ.ವ.ವ.ದಿನಾಂಕ : 13/12/2024

2. ಕಾಯ್ದೆ ಮತ್ತು ಕಲಂಗಳು : Karnataka Transparency in public procurements act 1999 rules 2000 (U/s-23); IPC 1860 (U/s-120B,403,406,409)

3. (a) ಕೃತ್ಯ ನಡೆದ ದಿನ : Saturday ದಿನಾಂಕ ದಿಂದ : 19/09/2020 ದಿನಾಂಕ ವರೆಗೆ : 15/06/2021

ವೇಳೆಯಿಂದ : 10:30:00 ವೇಳೆಯವರೆಗೆ : 17:30:00

(b) ಠಾಣೆಯಲ್ಲಿ ವರ್ತಮಾನ ಸ್ವೀಕರಿಸಿದ ದಿನಾಂಕ : 13/12/2024 13:50:00 ಬರವಣಿಗೆಯಲ್ಲಿ / ಹೇಳಿಕೆ : Written

(c) ಪಿರ್ಯಾದುದಾರ / ಬಾತ್ಮೀದಾರ ತಡವಾಗಿ ವರದಿ ಮಾಡಿದಕ್ಕೆ ಕಾರಣಗಳು :

(d) ಜನರಲ್ ಡೈರಿ ಉಲ್ಲೇಖ ಸಂಖ್ಯೆ ಮತ್ತು ಸಮಯ : 2 , 13:50:00

4. (a) ಕೃತ್ಯ ನಡೆದ ಸ್ಥಳ :

Directorate of medical education and, M.S Building Dr. BR Ambedkar Veedi,
Bengaluru City, Karnataka, 560001

(b) ಪೊಲೀಸ್ ಠಾಣೆ ಯಿಂದ ಇರುವ ದಿಕ್ಕು ಮತ್ತು ದೂರ : towards east 50 meters

(c) ಗ್ರಾಮ : MS BUILDING ಗಸ್ತಿನ ಹೆಸರು : 1st beat

(d) ಸ್ಥಳವು ಬೇರೆ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವಂತಹದ್ದು ಆದರೆ ಆ ಪೊಲೀಸ್ ಠಾಣೆಯ ಹೆಸರು :

ಜಿಲ್ಲೆ :

5. ಪಿರ್ಯಾದುದಾರ/ಬಾತ್ಮೀದಾರ :

(a) ಹೆಸರು : Dr.Vishnuprasad M ತಂದೆ / ಗಂಡನ ಹೆಸರು :

(b) ವಯಸ್ಸು : 43 (c) ವೃತ್ತಿ: : Govt. official gazetted

(d) ಧರ್ಮ : (e) ಜಾತಿ :

(f) ಫ್ಯಾಕ್ಸ್ : (g) ಇ-ಮೇಲ್: : dmefa1970@gmail.com

(h) ದೂರವಾಣಿ : 9880049385 (i)ರಾಷ್ಟ್ರೀಯತೆ : India

(j) ಪಾಸ್ ಪೋರ್ಟ್ ಸಂಖ್ಯೆ : ನೀಡಿದ ದಿನಾಂಕ :

(k) ವಿಳಾಸ : BMCRI old building fort,K.R Road , Bengaluru City , Karnataka-560002

(l) ಲಿಂಗ : Male

(m) ಪಿರ್ಯಾದುದಾರ ಖುದ್ದಾಗಿ ನೋಡಿದ್ದರೆ ಅಥವಾ ಕೇಳಿಸಿಕೊಂಡಿದ್

YES

6. ಗೊತ್ತಿರುವ / ಅನುಮಾನಿತ/ಅಪರಿಚಿತ ವ್ಯಕ್ತಿಯ ಪೂರ್ತಿ ವಿವರಗಳು

| Sl.No. | ಹೆಸರು / ತಂದೆಯ ಹೆಸರು / ಜಾತಿ / ವಿಳಾಸ | ವಿಧ | ವ್ಯಕ್ತಿಯ ವಿಧ | ಲಿಂಗ | ವಯಸ್ಸು | ವೃತ್ತಿ |
|---|---|---|---|---|---|---|
| 1 | Girish Dr P G(A1) ,No98/2 Rathnarigi 4th Cross 1st Block,Jayanagara EastBengaluru City, Karnataka-560011 | Accused | Adult | Male | | Doctor |
| 2 | Raghu G P(A2) ,No 22/1 Sree lakshmi nilay 11 Cross 1MN Road,Prasanth nagaraBengaluru City, Karnataka-560079 | Accused | Adult | Male | | Govt. official gazetted |
| 3 | Muniraju N(A3) ,Helth and Femily wellfare Dept , Leprosy Hospital,MAGADI RoadBengaluru City, Karnataka-560023 | Accused | Adult | Male | | Govt. official non-gazetted |
| 4 | Laj exports(A4) ,No 127, sth Main, Industrial suburb,YeshavanthpuraBengaluru City, Karnataka-560022 | Accused | Adult | Male | | Businessman |
| 5 | MsPrudent Management Solutions(A5) ,No G-95 Om Heera panna premises Oshwara Link Road,Andheri westMumbai city, Maharashtra | Accused | Adult | Male | | Businessman |

| | | | | | | |
|---|---|---|---|---|---|---|
| 6 | Karnataka People representatives(A6) ,NillBengaluru City, Karnataka | Accused | Adult | Male | | Politicians |
| 7 | Karanataka Govt Officers(A7) ,nillBengaluru City, Karnataka | Accused | Adult | Male | | |
| 8 | others(A8) ,nillBengaluru City, Karnataka | Accused | Adult | Male | | |

7. ನೊಂದವರ ವಿವರಗಳು

| Sl. No | ಹೆಸರು | ವಿಳಾಸ | ಗಾಯದ ವಿಧ | ಲಿಂಗ | ವಯಸ್ಸು | ವೃತ್ತಿ |
|---|---|---|---|---|---|---|
| 1 | | | | | | |

8. ಕಳುವಾಗಿರುವ / ಬಾಗಿಯಾಗಿರುವ ಸ್ವತ್ತುಗಳ ವಿವರಗಳು

| Sl.No | Property Type | Item description | Estimated Value (in Rs.) |
|---|---|---|---|
| 1 | | | |

ಕಳುವಾಗಿರುವ / ಬಾಗಿಯಾಗಿರುವ ಸ್ವತ್ತುಗಳು ಮೌಲ್ಯ :

9. ಪಂಚನಾಮ ವರದಿ / ಯು.ಡಿ. ಕೇಸ್. ಸಂಖ್ಯೆ :

10. ಪ್ರಥಮ ವರ್ತಮಾನ ವರದಿಯ ವಿವರಗಳು

ಡಾ ವಿಷ್ಣುಪ್ರಸಾದ.ಎಂ, ಮುಖ್ಯ ಲೆಕ್ಕ ಪತ್ರಾಧಿಕಾರಿಗಳು ಆದ ನಾನು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಮೇಲ್ಕಂಡ ವಿಷಯದಲ್ಲಿ ತಿಳಿಸಿರುವಂತೆ ಕೊವಿಡ್ -19ರ ಮಹಾಮಾರಿಯ ಸಂದರ್ಭದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಮೂಲಕ ಕೊವಿಡ್ 19 ನಿವಾರಣೆಗೆ ಅತ್ಯವಶ್ಯಕವಾಗಿ ಬೇಕಾಗಿದ್ದ ಎನ್ 95 ಮಾಸ್ಕ್, ಪಿಪಿಇ ಕಿಟ್ ಹಾಗೂ ಇತರ ಸಾಮಾಗ್ರಿಗಳನ್ನು ಸಂಗ್ರಹಿಸಿರುವ ಸನ್ನಿವೇಶವನ್ನು /ಸಂದರ್ಭವನ್ನು ದುರ್ಬಳಕೆ ಮಾಡಿಕೊಂಡು ಕಾನೂನಿನ ಎಲ್ಲಾ ಪ್ರಕ್ರಿಯೆಯನ್ನು ಗಾಳಿಗೆ ತೂರಿ ಕೆಟಿಪಿಪಿ ಕಾನೂನು ಮತ್ತು ಇತರ ಕಾನೂನನ್ನು ಉಲ್ಲಂಘಿಸಿ ಒಂದು ಅಪರಾಧೀಕರಣ ಷಡ್ಯಂತ್ರವನ್ನು ರೂಪಿಸಿ ಇಲ್ಲಿ ನೇಮಿಸಿರುವ ಅಧಿಕಾರಿಗಳು ಮತ್ತು ಖಾಸಗೀ ವ್ಯಕ್ತಿಗಳು ಮತ್ತು ಇತರರು ಒಳಗೊಂಡಂತಹ ಷಡ್ಯಂತ್ರದ ಮೂಲಕ ಈ ಅತೀಅವಶ್ಯಕ ಸಾಮಾಗ್ರಿಗಳನ್ನು ಸಂಗ್ರಹಿಸಿ ಆ ನೆಪದಲ್ಲಿ ನೂರಾರು ಕೋಟಿ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದು, ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಸೆಕ್ಷನ್ 406,409 ಮತ್ತು 120(B) ರಡಿಯಲ್ಲಿ ಅಪರಾಧ ಎಸಗಿರುವ ಬಗ್ಗೆ ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ದೂರನ್ನು ದಾಖಲಿಸಿ ತನಿಖೆ ಕೈಗೊಳ್ಳಲು ಈ ಮನವಿ.

ಈ ವಿಚಾರವಾಗಿ ವೈದ್ಯಕೀಯಶಿಕ್ಷಣ ಇಲಾಖೆಯ ಮುಖಾಂತರ ಪಿಪಿಇ ಕಿಟ್, ಎನ್ 95 ಮಾಸ್ಕ್‌ಗಳನ್ನು ಖರೀದಿ ಮಾಡಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಹಲವಾರು ಅಪರಾಧಗಳು ಮೇಲ್ನೋಟಕ್ಕೆ ಕಂಡು ಬಂದಿರುವುದು, ಈ ಅಪರಾಧಗಳನ್ನು ಇಲ್ಲಿ ನೇಮಿಸಿರುವಂತಹ ಸರ್ಕಾರಿ ಅಧಿಕಾರಿಗಳು, ಖಾಸಗೀ ವ್ಯಕ್ತಿಗಳು ಮತ್ತು ಇತರರು ಷಡ್ಯಂತ್ರವನ್ನು ರೂಪಿಸಿ ಸರ್ಕಾರಕ್ಕೆ ದೊಡ್ಡ ಪ್ರಮಾಣದಲ್ಲಿ ಹಣವನ್ನು ನಷ್ಟ ಉಂಟುಮಾಡಿ ತಮ್ಮ ಸ್ವಂತ ಲಾಭ ಪಡೆದಿರುವುದು ಕಂಡು ಬಂದಿರುತ್ತದೆ. ಇಲಾಖೆಯ ಮೂಲಕ ಕೊವಿಡ್-19ರ ಕಾಲಾವಧಿಯಲ್ಲಿ 15,51,713 ಪಿಪಿಇ ಕಿಟ್ 203,66,23,312 ರೂಪಾಯಿಗಳ ಮೌಲ್ಯ ಹೊಂದಿರುವುದು ಹಾಗೂ 42,15,047 ಎನ್ 95 ಮಾಸ್ಕ್‌ 9ಕೋಟಿ 75 ಲಕ್ಷ ಮೌಲ್ಯ ಹೊಂದಿರುವುದನ್ನು ಸಂಗ್ರಹಿಸಿರುವುದು ಕಂಡು ಬಂದಿರುತ್ತದೆ.

ದಾಖಲೆಗಳಲ್ಲಿ ನೋಡಿದಾಗ ದಿನಾಂಕ:18-08-2020ರಂದು ಕರ್ನಾಟಕ ರಾಜ್ಯ ಸರ್ಕಾರ, ಕಾನೂನಾತ್ಮಕ, ಆಡಳಿತಾತ್ಮಕ ಅನುಮೋದನೆ ನೀಡಿ 2,59,263 ಎನ್ 95 ಮಾಸ್ಕ್ ಮತ್ತು 2,59,263 ಪಿಪಿಇ ಕಿಟ್ ಒಟ್ಟು ರೂ.41.35 ಕೋಟಿಯ ಮೌಲ್ಯದ ಸಾಮಾಗ್ರಿಗಳನ್ನು ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗಳಿಗೆ 17 ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಮತ್ತು ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಬಳಸಲು ಅನುಮೋದನೆ ನೀಡಿದ್ದು, ಆ ಅನುಮೋದನೆಯಲ್ಲಿ ಕೆಟಿಪಿಪಿ ಕಾನೂನಿನ ಕಾಯ್ದೆಗಳನ್ನು ಪೂರ್ಣ ಪ್ರಮಾಣದಲ್ಲಿ ಪಾಲನೆ ಮಾಡಬೇಕು ಮತ್ತು ಅನುಮೋದನೆ ನೀಡಿದರೂ.41.35 ಕೋಟಿಯ ಮೌಲ್ಯದ ಮೇಲೆ ಹೋಗಬಾರದೆಂದು ಷರತ್ತು ವಿಧಿಸಲಾಗಿತ್ತು. ಇದರ ನಂತರ ಇಲಾಖೆಯು ಟೆಂಡರ್ ಕರೆದಿದ್ದು, 3 ಸಂಸ್ಥೆಗಳು ಈ ಬಿಡ್ನಲ್ಲಿ ಭಾಗವಹಿಸಿರುತ್ತವೆ. ಲಾಜ್‌ಎಕ್ಸ್‌ಪೋರ್ಟ್ಸ್ ಎಂಬ ಸಂಸ್ಥೆಯು ಒಂದು ಪಿಪಿಇ ಕಿಟ್ಗೆ 1312.50ರೂ ನಂತೆ ಕನಿಷ್ಠ ಬಿಡ್ದುದಾರರಾಗಿರುವುದರಿಂದ ಅವರ ಬಿಡ್‌ಅನ್ನು ಸ್ವೀಕರಿಸಿ ಅವರಿಂದ ಖರೀಧಿಗೆ ಆದೇಶವನ್ನು ದಿನಾಂಕ: 7-9-2020ರಂದು ಹೊರಡಿಸಲಾಗಿರುತ್ತದೆ. 2,59,263 ಸಂಖ್ಯೆಯ ಪಿಪಿಇ ಕಿಟ್ಟ್‌ಗಳನ್ನು 15ದಿನಗಳ ಒಳಗಾಗಿ ಸರಬರಾಜು ಮಾಡಲು ಆದೇಶವಾಗಿರುತ್ತದೆ. ಇದರ ನಂತರ ದಾಖಲೆಗಳಲ್ಲಿ ಪಿಪಿಇ ಕಿಟ್‌ಅನ್ನು 17 ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆಒಂದು ಸೂಪರ್ ಸ್ಪೆಷಾಲಿಟಿಆಸ್ಪತ್ರೆಗೆ ನೀಡಿರುವ ಬಗ್ಗೆ ಯಾವುದೇ ದಾಖಲೆಗಳು ಕಂಡುಬರುವುದಿಲ್ಲ ಆದರೂ ಕೂಡ ಮೊತ್ತ.41,34,99,172-00 ರೂಗಳನ್ನು ಪ್ರೂಡೆಂಟ್ ಮ್ಯಾನೇಜ್ಮೆಂಟ್ ಸಲೂಷನ್ಸ್ ಮುಂಬಯಿ ಎಂಬ ಸಂಸ್ಥೆಗೆ ದಿನಾಂಕ: 19.9.2020 ರಿಂದ 24.11.2020ರ ಸಮಯದಲ್ಲಿ ನೀಡಿರುವುದು ದಾಖಲೆಗಳಿಂದ ಕಂಡು ಬಂದಿರುತ್ತದೆ. ಇದಲ್ಲದೇ ಮೊತ್ತ.41,34,99,187-00 ರೂಪಾಯಿಗಳನ್ನು ಸಂಖ್ಯೆ-2,59,263 ಪಿಪಿಇ ಕಿಟ್ಟ್‌ಗಳಿಗೆ ಅಲ್ಲದೇ ಅದಕ್ಕಿಂತ ಹೆಚ್ಚುವರಿಯಾಗಿ ಸಂಖ್ಯೆ-55,784ಪಿಪಿಇ ಕಿಟ್ಟ್‌ಗಳಿಗೆ ನೀಡಿರುತ್ತಾರೆ. ಈ ಹೆಚ್ಚುವರಿ ಪಿಪಿಇ ಕಿಟ್ಟ್‌ಗಳನ್ನು ಯಾವುದೇ ಟೆಂಡರ್ ಪ್ರಕ್ರಿಯೆ ಇಲ್ಲದೇ ಖರೀದಿಸಿರುವುದು ಹಾಗೂ ಮೊತ್ತ-41.35 ಕೋಟಿ ರೂಪಾಯಿಯ ಅನುದಾನವನ್ನು ಪಿಪಿಇ ಕಿಟ್ ಮತ್ತು ಎನ್ 95 ಮಾಸ್ಕ್‌ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದರೂ ಕೂಡ ಈ ಸಂಪೂರ್ಣವಾದ ಮೊತ್ತವನ್ನು ಪಿಪಿಇ ಕಿಟ್ಟ್‌ಗಳಿಗೆ ಮಾತ್ರ ವೆಚ್ಚ ಮಾಡಿರುವುದು ಕೂಡ ಕಾನೂನು ಬಾಹಿರವಾಗಿರುತ್ತದೆ. ಇದಲ್ಲದೇ ಸಂಖ್ಯೆ-55,784 ಪಿಪಿಇ ಕಿಟ್ ಖರೀದಿಯ ಮೊತ್ತ.7,32,16,500 ರೂಪಾಯಿಯು ಪೂರ್ಣ ಪ್ರಮಾಣದಲ್ಲಿ ಕಾನೂನು ಬಾಹಿರವಾಗಿರುವುದು ಸ್ಪಷ್ಟವಾಗಿರುತ್ತದೆ.

ಇದಕ್ಕೂ ಮೀರಿ ಸಂಖ್ಯೆ-13,784 ಪಿಪಿಇ ಕಿಟ್ಟ್‌ಗಳನ್ನು ಯಾವುದೇ ಸರಬರಾಜು ಆದೇಶ ಇಲ್ಲದೇ, ಪ್ರಕ್ರಿಯೆಯನ್ನು ಅಳವಡಿಸದೇ, ಖರೀದಿ ಮಾಡಿರುವುದು ಕಂಡು ಬಂದಿರುತ್ತದೆ. ಇದಕ್ಕೆ ಯಾವುದೇ ರೀತಿಯಾದ ಅನುದಾನದ ಅನುಮೋದನೆ ಇಲ್ಲದೇ ಖರೀದಿ ಮಾಡಿರುತ್ತಾರೆ. ಮತ್ತು ಸಂಖ್ಯೆ 13,784 ಪಿಪಿಇ ಕಿಟ್ಟ್‌ಗಳನ್ನು ಎಲ್ಲಿಗೆ ನೀಡಿರುತ್ತಾರೆ ಎಂಬುದರ ಬಗ್ಗೆ ಯಾವುದೇ ದಾಖಲೆಗಳು ಕಂಡು ಬಂದಿರುವುದಿಲ್ಲ. ಈ ಪಿಪಿಇ ಕಿಟ್ಟ್‌ಗಳಿಂದ ಮೊತ್ತ ??.1,80,91,500/- ರೂಗಳು ವೆಚ್ಚವಾಗಿರುವುದು ಕೂಡ ದಾಖಲೆಗಳಿಂದ ಕಂಡು ಬಂದಿರುತ್ತದೆ. ನಂತರ ಸರ್ಕಾರಿ ಆದೇಶ ಸಂಖ್ಯೆ: ದಿನಾಂಕ:20-12-2020ರಂತೆ ಮೊತ್ತ ??. 23,31,44,462-00 ರೂಪಾಯಿಗಳನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು, ಇವರಿಗೆ ಪಿಪಿಇ ಕಿಟ್ ಮತ್ತು ಎನ್ 95 ಮಾಸ್ಕ್‌ಗಳ ಖರೀದಿಗೆ ಸರವು ನೀಡಿರುತ್ತದೆ. ನಂತರ ದಿನಾಂಕ: 20-03-2021ರಂದು ಸರ್ಕಾರವು ಮತ್ತೊಂದು ಆದೇಶದಲ್ಲಿ ರೂ.12.00 ಕೋಟಿಗಳನ್ನು ವಿಶೇಷ ಪ್ರಕರಣವೆಂದು ನೀಡಿದ್ದು, ಈ ಹಣವನ್ನು ಸಂಖ್ಯೆ-91,450 ಪಿಪಿಇ ಕಿಟ್ ಮತ್ತು ಎನ್ 95 ಮಾಸ್ಕ್‌ಗಳನ್ನು ಖರೀಧಿಸಲು ಉಪಯೋಗಿಸತಕ್ಕದ್ದು, ಹಾಗೂ ಈ ಮೊತ್ತವನ್ನು 30 ದಿನಗಳ ಒಳಗಾಗಿ ನೀಡತಕ್ಕದ್ದು, ಎಂಬ

ಷರತ್ತುಗಳನ್ನು ವಿಧಿ?ಲಾಗಿರುತ್ತದೆ. ಮತ್ತೊಂದು ಸರ್ಕಾರಿ ಆದೇಶದ ಮೂಲಕ ದಿನಾಂಕ:29-3-2021ರಂದು ರೂ.49.01ಕೋಟಿ ಹಣವನ್ನು ಪಿಪಿಇ ಕಿಟ್ ಮತ್ತು ಎನ್ 95 ಮಾಸ್ಕ್‌ಗಳನ್ನು ಖರೀದಿಸಲು ನೀಡಿದ್ದು, ಕೆಟಿಪಿಪಿ ಕಾಯ್ದೆಯ ಅಡಿಯಲ್ಲಿ ಕಾನೂನಿಗೆ ಬದ್ಧವಾಗಿ ಮತ್ತು ಸೂಕ್ತವಾದ ಬಳಿಕ ಪ್ರಮಾಣ ಪತ್ರವನ್ನು ಅಕೌಂಟೆಂಟ್ ಜನರಲ್ ಕಛೇರಿ ನೀಡಬೇಕೆಂದು ಎಂದು ಷರತ್ತು ವಿಧಿಸಿ ನೀಡಲಾಗಿರುತ್ತದೆ. ಈ ಸರ್ಕಾರಿ ಆದೇಶಗಳ ನಂತರ ಲಾಜ್ ಎಕ್ಸ್‌ಪೋರ್ಟ್ಸ್‌ರವರಿಂದ ನೇರವಾಗಿ 6,22,350 ಸಂಖ್ಯೆಯ ಪಿಪಿಇ ಕಿಟ್ಟುಗಳನ್ನು ಮೊತ್ತ 81,68,34,375 ರೂಪಾಯಿಗಳ ವೆಚ್ಚಗಳಲ್ಲಿ ಖರೀದಿಸಿರುತ್ತಾರೆ. ಈ 5 ಖರೀದಿ ಆದೇಶಗಳನ್ನು ಯಾವುದೇ ರೀತಿಯಾದ ಟೆಂಡರ್ ಪ್ರಕ್ರಿಯೆ ಇಲ್ಲದೇ, ಯಾವುದೇ ವಿವಿಧ ಸಂಸ್ಥೆಗಳಿಂದ ಕೊಟೇಷನ್ ಕರೆಯದೇ, ನೇರವಾಗಿ ಲಾಜ್ ಎಕ್ಸ್‌ಪೋರ್ಟ್ಸ್‌ಗೆ ನೀಡಿರುವುದು ಕಾನೂನು ಬಾಹಿರವಾಗಿರುತ್ತದೆ ಹಾಗೂ ಕೆಟಿಪಿಪಿ ಕಾಯ್ದೆಯ ಉಲ್ಲಂಘನೆಯಾಗಿರುತ್ತದೆ.

ಈ ಖರೀದಿ ಪ್ರಕ್ರಿಯೆಗಳು ಪೂರ್ಣವಾಗಿ ಕಾನೂನು ಬಾಹಿರವಾಗಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಇದಲ್ಲದೇ ಮೊತ್ತ.23-00ಕೋಟಿ ರೂಪಾಯಿಯನ್ನು ದಿನಾಂಕ:22.12.2020 ರಂದು ಸರ್ಕಾರದಿಂದ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯಕ್ಕೆ ಪಾವತಿಯಾಗಿರುವುದು ಕಂಡುಬಂದಿರುತ್ತದೆ. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಿಂದ ಮೊತ್ತ.13,16,83,800/- ರೂಗಳನ್ನು ಪ್ರೂಡೆಂಟ್ ಮ್ಯಾನೇಜ್ಮೆಂಟ್ ಸಲ್ಯೂಷನ್ ಮುಂಬಯಿರವರಿಗೆ ದಿನಾಂಕ:05-11-2020ರಂದು ಪಾವತಿ ಮಾಡಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ. ಸರ್ಕಾರದಿಂದ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯಕ್ಕೆ ಹಣ ಪಾವತಿ ಆಗಿರುವ ಮುನ್ನವೇ ಪ್ರೂಡೆಂಟ್ ಮ್ಯಾನೇಜ್ಮೆಂಟ್ ಸಲ್ಯೂಷನ್ ಮುಂಬಯಿ ರವರಿಗೆ ಹಣ ಪಾವತಿ ಆಗಿರುವುದುಕಂಡು ಬಂದಿರುತ್ತದೆ.

2,67,960 ಪಿಪಿಇ ಕಿಟ್ಟುಗಳನ್ನು ಕೆಎಸ್‌ಎಂಎಸ್‌ಸಿಎಲ್ ಸಂಸ್ಥೆಗೆ ನೀಡಿರುವುದಾಗಿ ದಾಖಲೆಗಳು ಲಭ್ಯವಿರುತ್ತದೆ. ಎರಡು ಖರೀದಿ ಆದೇಶಗಳನ್ನು ದಿನಾಂಕ 15.6.2021ರಂದು ಅಂದಿನ ನಿರ್ದೇಶಕರು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರು ನೀಡಿದ್ದು 3,00,000 ಪಿಪಿಇಕಿಟ್ ಗಳನ್ನು ಸರಬರಾಜು ಮಾಡಲು ನೀಡಿದ್ದು ಇದರಲ್ಲಿ ಕೇವಲ 267960 ಪಿಪಿಇಕಿಟ್ಟುಗಳನ್ನು ಕೆಎಸ್‌ಎಂಎಸ್‌ಸಿಎಲ್ ಸರಬರಾಜು ಮಾಡಿರುವುದು ಕಂಡುಬಂದಿರುತ್ತದೆ. ಈ ಪೂರ್ಣವಾದಂತಹ ಪಿಪಿಇ ಕಿಟ್ಟುಖರೀದಿ ಹಾಗೂ ಸರಬರಾಜಿಗೆ ಯಾವುದೇ ಹಣ ಪಾವತಿಸಿರುವುದಿಲ್ಲ. ಆದರೂ ಈ ಪೂರ್ಣ ಮೊತ್ತದ ಖರೀದಿ ರೂ. 35,16,97,500 ವೆಚ್ಚದ ಖರೀದಿಯಾಗಿರುತ್ತದೆ. ಈ ಪೂರ್ಣ ವೆಚ್ಚದ ಖರೀದಿಯಲ್ಲಿ ಕಾನೂನು ಬಾಹಿರವಾಗಿದೆ ಎಂದು ದಾಖಲೆಗಳಲ್ಲಿ ಸ್ಪಷ್ಟವಾಗಿರುತ್ತದೆ.

ದಾಖಲೆಗಳ ಪರಿಶೀಲನೆಯಲ್ಲಿ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯವರು 45000 ಪಿಪಿಇಕಿಟ್ ಗಳನ್ನು ಉಪಯೋಗಸದೇ ಸ್ಟಾಕ್‌ನಲ್ಲಿಟ್ಟಿರುತ್ತಾರೆ. ಹಾಗೂ ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯವರು 34390 ಪಿಪಿಇಕಿಟ್ ಗಳನ್ನು ಬಳಸದೇ ಇಟ್ಟಿರುತ್ತಾರೆ. ಈ ಬಳಕೆ ಆಗದೇ ಉಳಿದ ಪಿಪಿಇಕಿಟ್ಟುಗಳ ಒಟ್ಟು ಮೊತ್ತರೂ. 9,99,54,625 ಗಳ ಮೌಲ್ಯವಾಗಿದ್ದು ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟಾಗಿರುತ್ತದೆ. ದಾಖಲೆಗಳಿಂದ ಸ್ಪಷ್ಟವಾಗಿ ಕಂಡುಬರುವ ಅವ್ಯವಹಾರ ಹಾಗೂ ಕಾನೂನು ಬಾಹಿರ ನಡೆ ಅಂದರೆ ಈ ಪೂರ್ಣಪ್ರಮಾಣದ ವಹಿವಾಟುಗಳು ಲಾಜ್‌ಎಕ್ಸ್‌ಪೋರ್ಟ್ಸ್ ಜೊತೆಗೆ ನಡೆದಿದ್ದರೂ ಕೂಡ ಇದರ ಸರಬರಾಜನ್ನು ಪ್ರೂಡೆಂಟ್ ಮ್ಯಾನೇಜ್ಮೆಂಟ್ ಸಲ್ಯೂಷನ್ಸ್ ಎಂಬ ಸಂಸ್ಥೆಯವರು ಮಾಡಿರುವುದಾಗಿ ತೋರಿಸಿ, ಪೂರ್ಣ ಪ್ರಮಾಣದ ಮೊತ್ತವನ್ನು ಪ್ರೂಡೆಂಟ್ ಮ್ಯಾನೇಜ್ಮೆಂಟ್ ಸಲ್ಯೂಷನ್ಸ್ ಸಂಸ್ಥೆಯವರಿಗೆ ಪಾವತಿಯಾಗಿರುತ್ತದೆ. ದಾಖಲೆಗಳಲ್ಲಿ ಮತ್ತು ಕಾನೂನಿನ ಅಡಿಯಲ್ಲಿ ಡಿಎಂಇ ನಿರ್ದೇಶಕರು, ಇವರು ಯಾವುದೇ ಕಾರಣಕ್ಕೂ ಯಾವುದೇ ಹಣವನ್ನು ಪ್ರೂಡೆಂಟ್ ಮ್ಯಾನೇಜ್ಮೆಂಟ್ ಸಲ್ಯೂಷನ್ಸ್‌ರವರಿಗೆ ನೀಡಲು ಅವಕಾಶವಿಲ್ಲದಿದ್ದರೂ ಕೂಡ ರೂ. 39,54,07,627 ರೂಪಾಯಿಗಿಂತ ಹೆಚ್ಚು ಹಣವನ್ನು ಪಾವತಿಸಿರುವುದು ಹಾಗೂ ಲಾಜ್‌ಎಕ್ಸ್‌ಪೋರ್ಟ್ಸ್ ಲಿಮಿಟೆಡ್., ರವರಿಗೆ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದುಕಂಡು ಬಂದಿರುತ್ತದೆ. ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ ಮೆ. ಲಾಜ್‌ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಎಂಬ ಸಂಸ್ಥೆಯು ಕಾನೂನಿನ ಅಡಿಯಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಿಲ್ಲದಿದ್ದರೂ ಮತ್ತು ಯೋಗ್ಯರಿಲ್ಲದಿದ್ದರೂ ಕೂಡ ಲಾಜ್‌ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಇವರಿಗೆ ದೊಡ್ಡ ಪ್ರಮಾಣದ ಟೆಂಡರನ್ನು ನೀಡಿದ್ದು ಎನ್-95 ಮಾಸ್ಕ್ ಮತ್ತು ಪಿಪಿಇ ಕಿಟ್ ಗಳನ್ನು ಹೆಚ್ಚಾಗಿ ಖರೀದಿ ಮಾಡಿದ್ದು ಈ ಖರೀದಿಯ ಪೂರ್ಣ ಮೊತ್ತವನ್ನು ಟೆಂಡರ್‌ನಲ್ಲಿ ಭಾಗವಹಿಸದೇ ಇರುವ ಸಂಸ್ಥೆಯಾದ ಪ್ರೂಡೆಂಟ್ ಮ್ಯಾನೆಜಮೆಂಟ್ ಸಲ್ಯೂಷನ್ಸ್ ಸಂಸ್ಥೆಯವರಿಗೆ ಹಣವನ್ನು ಪಾವತಿಮಾಡಿದ್ದು ಮತ್ತು ಖರೀದಿಯಲ್ಲಿ ಎನ್-95 ಮಾಸ್ಕ್ ಮತ್ತು ಪಿಪಿಇ ಕಿಟ್ ಗಳನ್ನು ಪೂರ್ಣ ಪ್ರಮಾಣದಲ್ಲಿ ಡೆಲಿವರಿಯಾಗದೇ ಇರುವುದು ಕಂಡುಬಂದಿರುವುದರಿಂದ, ಲಾಜ್‌ಎಕ್ಸ್‌ಪೋರ್ಟ್ಸ್ ಲಿಮಿಟೆಡ್., ಮತ್ತು ಪ್ರೂಡೆಂಟ್ ಮ್ಯಾನೆಜಮೆಂಟ್ ಸಲ್ಯೂಷನ್ಸ್., ಎಂಬ ಎರಡು ಸಂಸ್ಥೆಗಳೊಂದಿಗೆ ಡಿಎಂಇ ಅಂದಿನ ನಿರ್ದೇಶಕರು ಡಾ.ಪಿ.ಜಿ.ಗಿರೀಶ್, ಜಂಟಿ ನಿಯಂತ್ರಕರು ರಾಜ್ಯ ಲೆಕ್ಕಪತ್ರ ಇಲಾಖೆ ಶ್ರೀ ರಘು ಜಿ.ಪಿ.ಮತ್ತು ಆರೋಗ್ಯ ಸಲಹರಣಾಧಿಕಾರಿಗಳಾದ ಶ್ರೀ ಮುನಿರಾಜುರವರು ಮತ್ತು ದೊಡ್ಡ ಮಟ್ಟದಲ್ಲಿ ಇದ್ದಂತಹ ರಾಜಕೀಯ ಕಾರ್ಯಾಂಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಂತಹ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು, ಶಾಮೀಲಾಗಿ ಅಪರಾಧೀಕರಣದ ಷಡ್ಯಂತರವನ್ನು ರೂಪಿಸಿ ಸರ್ಕಾರಕ್ಕೆ ಅಂದಿನ ತುರ್ತು ಪರಿಸ್ಥಿತಿಯ ಲಾಭವನ್ನು ಪಡೆದು ಕೋವಿಡ್-19 ಮಹಾಮಾರಿಯ ಸಂದರ್ಭದಲ್ಲಿ ಸರ್ಕಾರಕ್ಕೆ, ಸರ್ಕಾರದ ಆಸ್ತಿಗೆ ತಮ್ಮ ಸುಪರ್ದಿಯಲ್ಲಿದ್ದಂತಹ ಸರ್ಕಾರದ ಆಸ್ತಿಗೆ ಮತ್ತು ಸರ್ಕಾರದ ಹಣವನ್ನು ನಷ್ಟವುಂಟು ಮಾಡಿ ತಮಗೆ ಹೆಚ್ಚು ಪ್ರಮಾಣದ ಲಾಭವನ್ನು ಪಡೆಯಲು ಕೆಟಿಪಿಪಿ ಕಾಯ್ದೆಯ ಪೂರ್ಣ ಪ್ರಕ್ರಿಯೆಗಳನ್ನು ಗಾಳಿಗೆ ತೂರಿ

ಸಂಪೂರ್ಣ ಪ್ರಕ್ರಿಯೆ ಕಾನೂನು ಬಾಹಿರವಾಗಿ ನಡೆದಿರುತ್ತದೆ. ಇವರ ಈ ನಡೆಯಿಂದ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ಹಣ ನಷ್ಟವಾಗಿರುವುದಲ್ಲದೆ ಇಲ್ಲಿ ನೇಮಿಸಿರುವಂತಹ ಎಲ್ಲಾ ಅಧಿಕಾರಿಗಳು ಮತ್ತು ಈಗಾಗಲೇ ಹೇಳಿದ ಹಾಗೆ ರಾಜಕೀಯ ಕಾರ್ಯಾಂಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಂತಹ ಅಧಿಕಾರಿಗಳು ದೊಡ್ಡ ಪ್ರಮಾಣದ ಲಾಭವನ್ನು ಮೆ// ಲಾಜ್‌ಎಕ್ಸ್‌ಪೋರ್ಟ್ಸ್ ರವರಿಂದ ಪಡೆದು ಸರ್ಕಾರಕ್ಕೆ ಅಂದಾಜು ಒಟ್ಟು ರೂ. 167.00 ಕೋಟಿಗಳ ಆರ್ಥಿಕ ನಷ್ಟವಾಗಿರುವುದು ಕಾನೂನಿನ ಅಡಿಯಲ್ಲಿ ಭಾರತೀಯ ದಂಡ ಸಂಹಿತೆ ಕಲಂ 406,409 ಮತ್ತು 120(b) ರಡಿಯಲ್ಲಿ ಅಪರಾಧವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಸದರಿಯವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ತನಿಖೆ ನಡೆಸಲು ಕೋರಿ ದೂರು.

11. (a) ತೆಗೆದುಕೊಂಡ ಕ್ರಮ:

Investigation

(b) ಪ್ರ.ವ.ವರದಿಯನ್ನು ಪಿರ್ಯಾದಿಯವರಿಗೆ ಅವರದೆ ಭಾಷೆಯಲ್ಲಿ ವಿವರಿಸಿ, ಓದಿ ಹೇಳಲಾಗಿದೆ ಅದರ ಪ್ರತಿಯನ್ನು ಪುಕಟ್ಟೆಯಾಗಿ ಕೊಡಲಾಗಿದೆ? : Yes

(c) ಪೊಲೀಸ್ ಅಧಿಕಾರಿಯು ತನಿಖೆಗೆ ಸ್ಥಳಕ್ಕೆ ಧಾವಿಸದಿದ್ದಲ್ಲಿ ಅಥವಾ ತನಿಖೆ ಮಾಡಲು ನಿರಾಕರಿಸಿದಲ್ಲಿ ಕಲಂ 157 ಸಿ.ಆರ್.ಪಿ.ಸಿ ಯ ಕಲಂ (ಎ)ಅಥವಾ (ಬಿ)/176 ಬಿಎನ್‌ಎಸ್‌ಎಸ್ ಯಡಿ ಕಾರಣವನ್ನು ದಾಖಲಿಸಬೇಕು.

---

12. ಪಿರ್ಯಾದಿಯ ಸಹಿ/ ಹೆಬ್ಬೆರಳಿನ ಗುರುತು

13. ನ್ಯಾಯಾಲಯಕ್ಕೆ ಕಳುಹಿಸಿದ ದಿನಾಂಕ ಮತ್ತು ಸಮಯ : 13/12/2024 16:00:00

14. ನ್ಯಾಯಾಲಯಕ್ಕೆ ತೆಗೆದುಕೊಂಡು ಹೋದ ಪಿಸಿ/ ಹೆಚ್.ಸಿ : Sagar Basappa Jakati , PC 16335

ಓದಿ ಹೇಳಲಾಗಿ ಕೇಳಲಾಗಿ ಸರಿಯಿದೆ

ಠಾಣಾಧಿಕಾರಿಯ ಸಹಿ

ಹೆಸರು: KUMAR SWAMY S P - PI

ಪೊಲೀಸ್ ಇನ್ಸ್‌ಪೆಕ್ಟರ್
ವಿಧಾನಸೌಧ ಪೊಲೀಸ್ ಠಾಣೆ
ಬೆಂಗಳೂರು-560 001

ಪ್ರತಿಗಳು : Superintendent of Police/Commissioner of Police

ಇಂದ,

12–2024

ದಿನಾಂಕ:-13-12-2024

ಡಾ ವಿಷ್ಣುಪ್ರಸಾದ ಎಂ,

ಮುಖ್ಯ ಲೆಕ್ಕ ಪತ್ರಾಧಿಕಾರಿಗಳು,

ಹಾಗೂ ಆರ್ಥಿಕ ಸಲಹೆಗಾರರು,

ವೈದ್ಯಕೀಯ ಶಿಕ್ಷಣಾ ನಿರ್ದೇಶನಾಲಯ.

ಬೆಂಗಳೂರು – 560 002

ಇವರಿಗೆ,

ಠಾಣಾಧಿಕಾರಿಗಳು,

ವಿಧಾನಸೌಧ ಪೊಲೀಸ್ ಠಾಣೆ,

ಬಹುಮಹಡಿಕಟ್ಟಡ

ಬೆಂಗಳೂರು–01

ಮಾನ್ಯರೇ,

**ವಿಷಯ: ಕೋವಿಡ್–19ರ ನಿರ್ವಹಣೆಯಲ್ಲಿ ಎನ್–95 ಮಾಸ್ಕ್, ಪಿ ಪಿ ಇ ಕಿಟ್ ಮತ್ತು ಇತರೆ ಸಾಮಾಗ್ರಿಗಳನ್ನು ಸಂಗ್ರಹಿಸುವ ಪ್ರಕ್ರಿಯೆಯಲ್ಲಿ ಅಪರಾಧ ಹೂಡಲು ಷಡ್ಯಂತ್ರವನ್ನು ರೂಪಿಸಿ ಈ ಷಡ್ಯಂತ್ರದ ಪರಿಣಾಮವಾಗಿ ಸಾರ್ವಜನಿಕ ಹಣವನ್ನು ದುರ್ಬಳಕೆ ಆಗುವಂತಹ ನಡೆ ಆಧರಿಸಿ ಸರ್ಕಾರಿ ಆಸ್ತಿ ಮತ್ತು ಸರ್ಕಾರಿ ಹಣ ನೂರಾರು ಕೋಟಿಯಂತೆ ನಷ್ಟ ಮಾಡಿ ಸ್ವಂತ ಲಾಭವನ್ನು ಪಡೆದುಕೊಂಡಿರುವ ಬಗ್ಗೆ ದೂರು. ತಮ್ಮ ಸ್ವಾಧೀನದ ಮತ್ತು ಸುಪದ್ರಿಯಲ್ಲಿ ಇರುವಂತಹ ಸರ್ಕಾರಿ ಆಸ್ತಿಗಳು, ಹಣವನ್ನು ದುರ್ಬಳಕೆ ಮಾಡಿ ಸ್ವಂತ ಲಾಭವನ್ನು ಮಾಡಿರುವ ಬಗ್ಗೆ ದೂರು.**

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಡಾ ವಿಷ್ಣುಪ್ರಸಾದ.ಎಂ, ಮುಖ್ಯ ಲೆಕ್ಕ ಪತ್ರಾಧಿಕಾರಿಗಳು ಆದ ನಾನು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಮೇಲ್ಕಂಡ ವಿಷಯದಲ್ಲಿ ತಿಳಿಸಿರುವಂತೆ ಕೊವಿಡ್ – 19ರ ಮಹಾಮಾರಿಯ ಸಂದರ್ಭದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಮೂಲಕ ಕೊವಿಡ್ 19 ನಿವಾರಣೆಗೆ ಅತ್ಯವಶ್ಯಕವಾಗಿ ಬೇಕಾಗಿದ್ದಎನ್ 95 ಮಾಸ್ಕ್, ಪಿಪಿಇ ಕಿಟ್ ಹಾಗೂ ಇತರ ಸಾಮಾಗ್ರಿಗಳನ್ನು ಸಂಗ್ರಹಿಸಿರುವ ಸನ್ನಿವೇಶವನ್ನು /ಸಂದರ್ಭವನ್ನು ದುರ್ಬಳಕೆ ಮಾಡಿಕೊಂಡು ಕಾನೂನಿನ ಎಲ್ಲಾ ಪ್ರಕ್ರಿಯೆಯನ್ನು ಗಾಳಿಗೆ ತೂರಿಕೆಟಿಪಿಪಿ ಕಾನೂನು ಮತ್ತು ಇತರ ಕಾನೂನನ್ನು ಉಲ್ಲಂಘಿಸಿ ಒಂದು ಅಪರಾಧೀಕರಣ ಷಡ್ಯಂತ್ರವನ್ನು ರೂಪಿಸಿ ಇಲ್ಲಿ ನೇಮಿಸಿರುವ ಅಧಿಕಾರಿಗಳು ಮತ್ತು ಖಾಸಗೀ ವ್ಯಕ್ತಿಗಳು ಮತ್ತು ಇತರರು ಒಳಗೊಂಡಂತಹ ಷಡ್ಯಂತ್ರದ ಮೂಲಕ ಈ ಅತೀಅವಶ್ಯಕ ಸಾಮಾಗ್ರಿಗಳನ್ನು ಸಂಗ್ರಹಿಸಿ ಆ ನೆಪದಲ್ಲಿ ನೂರಾರು ಕೋಟಿ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದು, "ಭಾರತೀಯ ದಂಡ ಸಂಹಿತೆ" ಅಡಿಯಲ್ಲಿ ಸೆಕ್ಷನ್ 406,409 ಮತ್ತು 120ಃ ರಡಿಯಲ್ಲಿ ಅಪರಾಧ ಎಸಗಿರುವ ಬಗ್ಗೆ ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ದೂರನ್ನು ದಾಖಲಿಸಿ ತನಿಖೆ ಕೈಗೊಳ್ಳಲು ಈ ಮನವಿ.

ಈ ವಿಚಾರವಾಗಿ ವೈದ್ಯಕೀಯಶಿಕ್ಷಣ ಇಲಾಖೆಯ ಮುಖಾಂತರ ಪಿಪಿಇ ಕಿಟ್, ಎನ್ 95 ಮಾಸ್ಕ್‌ಗಳನ್ನು ಖರೀದಿ ಮಾಡಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಹಲವಾರು ಅಪರಾಧಗಳು ಮೇಲ್ನೋಟಕ್ಕೆ ಕಂಡು ಬಂದಿರುವುದು, ಈ ಅಪರಾಧಗಳನ್ನು ಇಲ್ಲಿ ನೇಮಿಸಿರುವಂತಹ ಸರ್ಕಾರಿ ಅಧಿಕಾರಿಗಳು, ಖಾಸಗೀ ವ್ಯಕ್ತಿಗಳು ಮತ್ತು ಇತರರು ಷಡ್ಯಂತ್ರವನ್ನು ರೂಪಿಸಿ ಸರ್ಕಾರಕ್ಕೆ ದೊಡ್ಡ ಪ್ರಮಾಣದಲ್ಲಿ ಹಣವನ್ನು ನಷ್ಟ ಉಂಟುಮಾಡಿ ತಮ್ಮ ಸ್ವಂತ ಲಾಭ ಪಡೆದಿರುವುದು ಕಂಡು ಬಂದಿರುತ್ತದೆ.

ಇಲಾಖೆಯ ಮೂಲಕ ಕೊವಿಡ್–19ರ ಕಾಲಾವಧಿಯಲ್ಲಿ 15,51,713 ಪಿಪಿಇ ಕಿಟ್ 203,66,23,312 ರೂಪಾಯಿಗಳ ಮೌಲ್ಯ ಹೊಂದಿರುವುದು ಹಾಗೂ 42,15,047 ಎನ್ 95 ಮಾಸ್ಕ್‌ರೂ 9ಕೋಟಿ 75 ಲಕ್ಷ ಮೌಲ್ಯ ಹೊಂದಿರುವುದನ್ನು ಸಂಗ್ರಹಿಸಿರುವುದು ಕಂಡು ಬಂದಿರುತ್ತದೆ.

ದಾಖಲೆಗಳಲ್ಲಿ ನೋಡಿದಾಗ ದಿನಾಂಕ:18–08–2020ರಂದು ಕರ್ನಾಟಕ ರಾಜ್ಯ ಸರ್ಕಾರ, ಕಾನೂನಾತ್ಮಕ, ಆಡಳಿತಾತ್ಮಕ ಅನುಮೋದನೆ ನೀಡಿ 2,59,263 ಎನ್ 95 ಮಾಸ್ಕ್ ಮತ್ತು 2,59,263 ಪಿಪಿಇ ಕಿಟ್‌ಒಟ್ಟುರೂ.41.35 ಕೋಟಿಯ ಮೌಲ್ಯದ ಸಾಮಾಗ್ರಿಗಳನ್ನು ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗಳಿಗೆ 17 ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಮತ್ತು ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಬಳಸಲು ಅನುಮೋದನೆ ನೀಡಿದ್ದು, ಆ ಅನುಮೋದನೆಯಲ್ಲಿ ಕೆಟಿಪಿಪಿ ಕಾನೂನಿನ ಕಾಯ್ದೆಗಳನ್ನು ಪೂರ್ಣ ಪ್ರಮಾಣದಲ್ಲಿ ಪಾಲನೆ ಮಾಡಬೇಕು ಮತ್ತು ಅನುಮೋದನೆ ನೀಡಿದರೂ.41.35 ಕೋಟಿಯ ಮೌಲ್ಯದ ಮೇಲೆ ಹೋಗಬಾರದೆಂದು ಷರತ್ತು ವಿಧಿಸಲಾಗಿತ್ತು. ಇದರ ನಂತರ ಇಲಾಖೆಯು ಟೆಂಡರ್ ಕರೆದಿದ್ದು, 3 ಸಂಸ್ಥೆಗಳು ಈ ಬಿಡ್‌ನಲ್ಲಿ ಭಾಗವಹಿಸಿರುತ್ತವೆ. ಲಾಜ್‌ಎಕ್ಸ್‌ಪೋರ್ಟ್ಸ್‌ಎಂಬ ಸಂಸ್ಥೆಯು ಒಂದು ಪಿಪಿಇ ಕಿಟ್‌ಗೆ 1312.50ರೂ ನಂತೆ ಕನಿಷ್ಟ ಬಿಡ್ಡುದಾರರಾಗಿರುವುದರಿಂದ ಅವರ ಬಿಡ್‌ಅನ್ನು ಸ್ವೀಕರಿಸಿ ಅವರಿಂದ ಖರೀಧಿಗೆ ಆದೇಶವನ್ನು ದಿನಾಂಕ: 7–9–2020ರಂದು ಹೊರಡಿಸಲಾಗಿರುತ್ತದೆ. 2,59,263 ಸಂಖ್ಯೆಯ ಪಿಪಿಇ ಕಿಟ್‌ಗಳನ್ನು 15ದಿನಗಳ ಒಳಗಾಗಿಸರಬರಾಜು ಮಾಡಲುಆದೇಶವಾಗಿರುತ್ತೆದೆ. ಇದರ ನಂತರ ದಾಖಲೆಗಳಲ್ಲಿ ಪಿಪಿಇ ಕಿಟ್‌ಅನ್ನು 17 ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆಒಂದು ಸೂಪರ್ ಸ್ಪೆಷಾಲಿಟಿಆಸ್ಪತ್ರೆಗೆ ನೀಡಿರುವ ಬಗ್ಗೆ ಯಾವುದೇ ದಾಖಲೆಗಳು ಕಂಡುಬರುವುದಿಲ್ಲ. ಆದರೂಕೂಡಮೊತ್ತ.41,34,99,172–00 ರೂಗಳನ್ನು**ಪ್ರೂಡೆಂಟ್ ಮ್ಯಾನೇಜ್ಮೆಂಟ್ ಸಲೂಷನ್ಸ್ ಮುಂಬಯಿ** ಎಂಬ ಸಂಸ್ಥೆಗೆ ದಿನಾಂಕ: 19.9.2020 ರಿಂದ 24.11.2020ರ ಸಮಯದಲ್ಲಿ ನೀಡಿರುವುದು ದಾಖಲೆಗಳಿಂದ ಕಂಡು ಬಂದಿರುತ್ತದೆ. ಇದಲ್ಲದೇ ಮೊತ್ತ.41,34,99,187–00 ರೂಪಾಯಿಗಳನ್ನು ಸಂಖ್ಯೆ–2,59,263 ಪಿಪಿಇ ಕಿಟ್‌ಗಳಿಗೆ ಅಲ್ಲದೇ ಅದಕ್ಕಿಂತ ಹೆಚ್ಚುವರಿಯಾಗಿ ಸಂಖ್ಯೆ–55,784ಪಿಪಿಇ ಕಿಟ್‌ಗಳಿಗೆ ನೀಡಿರುತ್ತಾರೆ. ಈ ಹೆಚ್ಚುವರಿ ಪಿಪಿಇ ಕಿಟ್‌ಗಳನ್ನು ಯಾವುದೇ ಟೆಂಡರ್ ಪ್ರಕ್ರಿಯೆ ಇಲ್ಲದೇ ಖರೀದಿಸಿರುವುದು ಹಾಗೂ ಮೊತ್ತ–41.35 ಕೋಟಿ ರೂಪಾಯಿಯ ಅನುದಾನವನ್ನು ಪಿಪಿಇ ಕಿಟ್ ಮತ್ತು ಎನ್ 95 ಮಾಸ್ಕ್‌ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದರೂ ಕೂಡ ಈ ಸಂಪೂರ್ಣವಾದ ಮೊತ್ತವನ್ನು ಪಿಪಿಇ ಕಿಟ್‌ಗಳಿಗೆ ಮಾತ್ರ ವೆಚ್ಚ ಮಾಡಿರುವುದು ಕೂಡ ಕಾನೂನು ಬಾಹಿರವಾಗಿರುತ್ತದೆ. ಇದಲ್ಲದೇ ಸಂಖ್ಯೆ–55,784 ಪಿಪಿಇ ಕಿಟ್ ಖರೀದಿಯ ಮೊತ್ತ.7,32,16,500 ರೂಪಾಯಿಯು ಪೂರ್ಣ ಪ್ರಮಾಣದಲ್ಲಿ ಕಾನೂನು ಬಾಹಿರವಾಗಿರುವುದು ಸ್ಪಷ್ಟವಾಗಿರುತ್ತದೆ.

ಇದಕ್ಕೂ ಮೀರಿಸಂಖ್ಯೆ–13,784 ಪಿಪಿಇ ಕಿಟ್‌ಗಳನ್ನುಯಾವುದೇ ಸರಬರಾಜು ಆದೇಶ ಇಲ್ಲದೇ, ಪ್ರಕ್ರಿಯೆಯನ್ನು ಅಳವಡಿಸದೇ, ಖರೀದಿ ಮಾಡಿರುವುದು ಕಂಡು ಬಂದಿರುತ್ತದೆ. ಇದಕ್ಕೆ ಯಾವುದೇ ರೀತಿಯಾದ ಅನುದಾನದ ಅನುಮೋದನೆ ಇಲ್ಲದೇ ಖರೀದಿ ಮಾಡಿರುತ್ತಾರೆ. ಮತ್ತು ಸಂಖ್ಯೆ 13,784 ಪಿಪಿಇ ಕಿಟ್‌ಗಳನ್ನು ಎಲ್ಲಿಗೆ ನೀಡಿರುತ್ತಾರೆ ಎಂಬುದರ ಬಗ್ಗೆ ಯಾವುದೇ ದಾಖಲೆಗಳು ಕಂಡು ಬಂದಿರುವುದಿಲ್ಲ. ಈ ಪಿಪಿಇ ಕಿಟ್‌ಗಳಿಂದ ಮೊತ್ತ ರೂ.1,80,91,500/– ರೂಗಳು ವೆಚ್ಚವಾಗಿರುವುದು ಕೂಡ ದಾಖಲೆಗಳಿಂದ ಕಂಡು ಬಂದಿರುತ್ತದೆ. ನಂತರ ಸರ್ಕಾರಿ ಆದೇಶ ಸಂಖ್ಯೆ: ದಿನಾಂಕ:20–12–

2020ರಂತೆ ಮೊತ್ತ ರೂ. 23,31,44,462–00 ರೂಪಾಯಿಗಳನ್ನು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು, ಇವರಿಗೆ ಪಿಪಿಇ ಕಿಟ್ ಮತ್ತು ಎನ್ 95 ಮಾಸ್ಕ್‌ಗಳ ಖರೀದಿಗೆ ಸರ್ಕಾರವು ನೀಡಿರುತ್ತದೆ. ನಂತರ ದಿನಾಂಕ: 20–03–2021ರಂದು ಸರ್ಕಾರವು ಮತ್ತೊಂದು ಆದೇಶದಲ್ಲಿ ರೂ.12.00 ಕೋಟಿಗಳನ್ನು ವಿಶೇಷ ಪ್ರಕರಣವೆಂದು ನೀಡಿದ್ದು, ಈ ಹಣವನ್ನು ಸಂಖ್ಯೆ–91,450 ಪಿಪಿಇ ಕಿಟ್ ಮತ್ತು ಎನ್ 95 ಮಾಸ್ಕ್‌ಗಳನ್ನು ಖರೀಧಿಸಲು ಉಪಯೋಗಿಸತಕ್ಕದ್ದು, ಹಾಗೂ ಈ ಮೊತ್ತವನ್ನು 30 ದಿನಗಳ ಒಳಗಾಗಿ ನೀಡತಕ್ಕದ್ದು, ಎಂಬ ಷರತ್ತುಗಳನ್ನು ವಿಧಿಸಲಾಗಿರುತ್ತದೆ. ಮತ್ತೊಂದು ಸರ್ಕಾರಿ ಆದೇಶದ ಮೂಲಕ ದಿನಾಂಕ:29–3–2021ರಂದು ರೂ.49.01ಕೋಟಿ ಹಣವನ್ನು ಪಿಪಿಇ ಕಿಟ್ ಮತ್ತುಎನ್ 95 ಮಾಸ್ಕ್‌ಗಳನ್ನು ಖರೀದಿಸಲು ನೀಡಿದ್ದುಕೆ ಟಿಪಿಪಿ ಕಾಯ್ದೆಯ ಅಡಿಯಲ್ಲಿ ಕಾನೂನಿಗೆ ಬದ್ದವಾಗಿ ಮತ್ತು ಸೂಕ್ತವಾದ ಬಳಕೆ ಪ್ರಮಾಣ ಪತ್ರವನ್ನು ಅಕೌಂಟೆಂಟ್ ಜನರಲ್ ಕಛೇರಿ ನೀಡಬೇಕೆಂದು ಎಂದು ಷರತ್ತು ವಿಧಿಸಿ ನೀಡಲಾಗಿರುತ್ತದೆ. ಈ ಸರ್ಕಾರಿ ಆದೇಶಗಳ ನಂತರ ಲಾಜ್ ಎಕ್ಸ್‌ಪೋರ್ಟ್ಸ್‌ರವರಿಂದ ನೇರವಾಗಿ 6,22,350 ಸಂಖ್ಯೆಯ ಪಿಪಿಇ ಕಿಟ್‌ಗಳನ್ನು ಮೊತ್ತ 81,68,34,375 ರೂಪಾಯಿಗಳ ವೆಚ್ಚಗಳಲ್ಲಿ ಖರೀದಿಸಿರುತ್ತಾರೆ. ಈ 5 ಖರೀದಿ ಆದೇಶಗಳನ್ನು ಯಾವುದೇ ರೀತಿಯಾದ ಟೆಂಡರ್ ಪ್ರಕ್ರಿಯೆ ಇಲ್ಲದೇ, ಯಾವುದೇ ವಿವಿಧ ಸಂಸ್ಥೆಗಳಿಂದ ಕೋಟೇಷನ್ ಕರೆಯದೇ, ನೇರವಾಗಿ ಲಾಜ್ ಎಕ್ಸ್‌ಪೋರ್ಟ್ಸ್‌ಗೆ ನೀಡಿರುವುದು ಕಾನೂನು ಬಾಹಿರವಾಗಿರುತ್ತದೆ ಹಾಗೂ ಕೆಟಿಪಿಪಿ ಕಾಯ್ದೆಯ ಉಲ್ಲಂಘನೆಯಾಗಿರುತ್ತದೆ.

ಈ ಖರೀದಿ ಪ್ರಕ್ರಿಯೆಗಳು ಪೂರ್ಣವಾಗಿ ಕಾನೂನು ಬಾಹಿರವಾಗಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಇದಲ್ಲದೇ ಮೊತ್ತ.23–00ಕೋಟಿ ರೂಪಾಯಿಯನ್ನು ದಿನಾಂಕ:22.12.2020 ರಂದು ಸರ್ಕಾರದಿಂದ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯಕ್ಕೆ ಪಾವತಿಯಾಗಿರುವುದು ಕಂಡುಬಂದಿರುತ್ತದೆ. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಿಂದ ಮೊತ್ತ.13,16,83,800/– ರೂಗಳನ್ನು **ಪ್ರೂಡೆಂಟ್ ಮ್ಯಾನೇಜ್ಮೆಂಟ್ ಸಲೂಷನ್ಸ್ ಮುಂಬಯಿ**ರವರಿಗೆ ದಿನಾಂಕ:05–11–2020ರಂದುಪಾವತಿ ಮಾಡಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ. ಸರ್ಕಾರದಿಂದ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯಕ್ಕೆ ಹಣ ಪಾವತಿಆಗಿರುವ ಮುನ್ನವೇ **ಪ್ರೂಡೆಂಟ್ ಮ್ಯಾನೇಜ್ಮೆಂಟ್ ಸಲೂಷನ್ಸ್ ಮುಂಬಯಿ ರವರಿಗೆ** ಹಣ ಪಾವತಿ ಆಗಿರುವುದುಕಂಡು ಬಂದಿರುತ್ತದೆ.

2,67,960 ಪಿಪಿಇ ಕಿಟ್‌ಗಳನ್ನು ಕೆಎಸ್‌ಎಂಸಿಎಲ್ ಸಂಸ್ಥೆಗೆ ನೀಡಿರುವುದಾಗಿ ದಾಖಲೆಗಳು ಲಭ್ಯವಿರುತ್ತದೆ. ಎರಡುಖರೀದಿ ಆದೇಶಗಳನ್ನು ದಿನಾಂಕ 15.6.2021ರಂದು ಅಂದಿನ ನಿರ್ದೇಶಕರು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರು ನೀಡಿದ್ದು 3,00,000 ಪಿಪಿಇಕಿಟ್ ಗಳನ್ನು ಸರಬರಾಜು ಮಾಡಲು ನೀಡಿದ್ದುಇದರಲ್ಲಿ ಕೇವಲ 267960 ಪಿಪಿಇಕಿಟ್‌ಗಳನ್ನು ಕೆಎಸ್‌ಎಂಸಿಎಲ್ ಸರಬರಾಜು ಮಾಡಿರುವುದು ಕಂಡುಬಂದಿರುತ್ತದೆ. ಈ ಪೂರ್ಣವಾದಂತಹ ಪಿಪಿಇ ಕಿಟ್‌ಖರೀದಿ ಹಾಗೂ ಸರಬರಾಜಿಗಿ ಯಾವುದೇ ಹಣ ಪಾವತಿಸಿರುವುದಿಲ್ಲ. ಆದರೂ ಈ ಪೂರ್ಣ ಮೊತ್ತದ ಖರೀದಿ ರೂ. 35,16,97,500 ವೆಚ್ಚದ ಖರೀದಿಯಾಗಿರುತ್ತದೆ. ಈ ಪೂರ್ಣ ವೆಚ್ಚದ ಖರೀದಿಯಲ್ಲಿ ಕಾನೂನು ಬಾಹಿರವಾಗಿದೆ ಎಂದು ದಾಖಲೆಗಳಲ್ಲಿ ಸ್ಪಷ್ಟವಾಗಿರುತ್ತದೆ.

ದಾಖಲೆಗಳ ಪರಿಶೀಲನೆಯಲ್ಲಿ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೇಯವರು 45000 ಪಿಪಿಇಕಿಟ್ ಗಳನ್ನು ಉಪಯೋಗಸದೇ ಸ್ಟಾಕ್‌ನಲ್ಲಿಟ್ಟಿರುತ್ತಾರೆ. ಹಾಗೂ ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯವರು 34390 ಪಿಪಿಇಕಿಟ್ ಗಳನ್ನು ಬಳಸದೇ ಇಟ್ಟಿರುತ್ತಾರೆ. ಈ ಬಳಕೆ ಆಗದೇ ಉಳಿದ ಪಿಪಿಇಕಿಟ್‌ಗಳ ಒಟ್ಟು ಮೊತ್ತರೂ. 9,99,54,625 ಗಳ ಮೌಲ್ಯವಾಗಿದ್ದು ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟಾಗಿರುತ್ತದೆ. ದಾಖಲೆಗಳಿಂದ ಸ್ಪಷ್ಟವಾಗಿ ಕಂಡುಬರುವ ಅವ್ಯವಹಾರ ಹಾಗೂ ಕಾನೂನು ಬಾಹಿರ ನಡೆಅಂದರೆ ಈ ಪೂರ್ಣಪ್ರಮಾಣದ ವಹಿವಾಟುಗಳು ಲಾಜ್‌ಎಕ್ಸಪೋರ್ಟ್ ಜೊತೆಗೆ ನಡೆದಿದ್ದರೂ ಕೂಡ ಇದರ ಸಪ್ಲೈಯನ್ನು ಪ್ರೂಡೆಂಟ್ ಮ್ಯಾನೇಜ್‌ಮೆಂಟ್ ಸಲ್ಯೂಷನ್ಸ್ ಎಂಬ ಸಂಸ್ಥೆಯವರು ಮಾಡಿರುವುದಾಗಿ ತೋರಿಸಿ, ಪೂರ್ಣ ಪ್ರಮಾಣದ ಮೊತ್ತವನ್ನು ಪ್ರೂಡೆಂಟ್ ಮ್ಯಾನೇಜ್‌ಮೆಂಟ್ ಸಲ್ಯೂಷನ್ಸ್

ಸಂಸ್ಥೆಯವರಿಗೆ ಪಾವತಿಯಾಗಿರುತ್ತದೆ. ದಾಖಲೆಗಳಲ್ಲಿ ಮತ್ತು ಕಾನೂನಿನ ಅಡಿಯಲ್ಲಿ ಡಿಎಂಇ ನಿರ್ದೇಶಕರು, ಇವರು ಯಾವುದೇ ಕಾರಣಕ್ಕೂ ಯಾವುದೇ ಹಣವನ್ನು ಪ್ರೂಡೆಂಟ್ ಮ್ಯಾನೇಜ್‌ಮೆಂಟ್ ಸಲ್ಯೂಷನ್ಸ್‌ರವರಿಗೆ ನೀಡಲು ಅವಕಾಶವಿಲ್ಲದಿದ್ದರೂ ಕೂಡ ರೂ. 39,54,07,627 ರೂಪಾಯಿಗಿಂತ ಹೆಚ್ಚು ಹಣವನ್ನು ಪಾವತಿಸಿರುವುದು ಹಾಗೂ ಲಾಜ್‌ಎಕ್ಸ್‌ಪೋರ್ಟ್ ಲಿಮಿಟೆಡ್., ರವರಿಗೆ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದುಕಂಡು ಬಂದಿರುತ್ತದೆ.

ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ ಮೆ. ಲಾಜ್‌ಎಕ್ಸ್ ಪೋರ್ಟ್ ಲಿಮಿಟೆಡ್ ಎಂಬ ಸಂಸ್ಥೆಯು ಕಾನೂನಿನ ಅಡಿಯಲ್ಲಿಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಿಲ್ಲದಿದ್ದರೂ ಮತ್ತು ಯೋಗ್ಯರಿಲ್ಲದಿದ್ದರೂ ಕೂಡ ಲಾಜ್‌ಎಕ್ಸ್ ಪೋರ್ಟ್ ಲಿಮಿಟೆಡ್ ಇವರಿಗೆ ದೊಡ್ಡ ಪ್ರಮಾಣದ ಟೆಂಡರ್‌ಅನ್ನು ನೀಡಿದ್ದು ಎನ್–95 ಮಾಸ್ಕ್ ಮತ್ತು ಪಿಪಿಇ ಕಿಟ್ ಗಳನ್ನು ಹೆಚ್ಚಾಗಿ ಖರೀದಿ ಮಾಡಿದ್ದು ಈ ಖರೀದಿಯ ಪೂರ್ಣ ಮೊತ್ತವನ್ನು ಟೆಂಡರ್‌ನಲ್ಲಿ ಭಾಗವಹಿಸದೇ ಇರುವ ಸಂಸ್ಥೆಯಾದ ಪ್ರೂಡೆಂಟ್ ಮ್ಯಾನೇಜಮೆಂಟ್ ಸಲ್ಯೂಷನ್ಸ್ ಸಂಸ್ಥೆಯವರಿಗೆ ಹಣವನ್ನು ಪಾವತಿಮಾಡಿದ್ದು ಮತ್ತುಖರೀದಿಯಲ್ಲಿ ಎನ್–95 ಮಾಸ್ಕ್ ಮತ್ತು ಪಿಪಿಇ ಕಿಟ್ ಗಳನ್ನು ಪೂರ್ಣ ಪ್ರಮಾಣದಲ್ಲಿಡೆಲಿವರಿಯಾಗದೇಇರುವುದುಕಂಡುಬಂದಿರುವುದರಿಂದ, ಲಾಜ್‌ಎಕ್ಸ್ ಪೋರ್ಟ್ ಲಿಮಿಟೆಡ್., ಮತ್ತು ಪ್ರೂಡೆಂಟ್ ಮ್ಯಾನೇಜಮೆಂಟ್ ಸಲ್ಯೂಷನ್ಸ್., ಎಂಬ ಎರಡು ಸಂಸ್ಥೆಗಳೊಂದಿಗೆ ಡಿಎಂಇ ಅಂದಿನ ನಿರ್ದೇಶಕರುಡಾ.ಪಿ.ಜಿ.ಗಿರೀಶ್, ಜಂಟಿ ನಿಯಂತ್ರಕರುರಾಜ್ಯ ಲೆಕ್ಕಪತ್ರ ಇಲಾಖೆ ಶ್ರೀ ರಘು ಜಿ.ಪಿ.ಮತ್ತುಆರೋಗ್ಯ ಸಲಕರಣಾಧಿಕಾರಿಗಳಾದ ಶ್ರೀ ಮುನಿರಾಜುರವರು ಮತ್ತು ದೊಡ್ಡ ಮಟ್ಟದಲ್ಲಿ ಇದ್ದಂತಹ ರಾಜಕೀಯ ಕಾರ್ಯಾಂಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಂತಹ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು, ಶಾಮೀಲಾಗಿ ಅಪರಾಧೀಕರಣದ ಷಡ್ಯಂತರವನ್ನು ರೂಪಿಸಿ ಸರ್ಕಾರಕ್ಕೆ ಅಂದಿನ ತುರ್ತು ಪರಿಸ್ಥಿತಿಯ ಲಾಭವನ್ನು ಪಡೆದು ಕೋವಿಡ್–19 ಮಹಾಮಾರಿಯ ಸಂದರ್ಭದಲ್ಲಿ ಸರ್ಕಾರಕ್ಕೆ, ಸರ್ಕಾರದ ಆಸ್ತಿಗೆ ತಮ್ಮ ಸುಪರ್ದಿಯಲ್ಲಿದ್ದಂತಹ ಸರ್ಕಾರದ ಆಸ್ತಿಗೆ ಮತ್ತು ಸರ್ಕಾರದ ಹಣವನ್ನು ನಷ್ಟವುಂಟುಮಾಡಿ ತಮಗೆ ಹೆಚ್ಚು ಪ್ರಮಾಣದ ಲಾಭವನ್ನು ಪಡೆಯಲು ಕೆಟಿಪಿಪಿ ಕಾಯ್ದೆಯ ಪೂರ್ಣ ಪ್ರಕ್ರಿಯೆಗಳನ್ನು ಗಾಳಿಗೆ ತೂರಿ ಸಂಪೂರ್ಣ ಪ್ರಕ್ರಿಯೆ ಕಾನೂನು ಬಾಹಿರವಾಗಿ ನಡೆದಿರುತ್ತದೆ. ಇವರ ಈ ನಡೆಯಿಂದ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿ ಹಣ ನಷ್ಟವಾಗಿರುವುದಲ್ಲದೆ ಇಲ್ಲಿ ನೇಮಿಸಿರುವಂತಹ ಎಲ್ಲಾ ಅಧಿಕಾರಿಗಳು ಮತ್ತು ಈಗಾಗಲೇ ಹೇಳಿದ ಹಾಗೆ ರಾಜಕೀಯ ಕಾರ್ಯಾಂಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಂತಹ ಅಧಿಕಾರಿಗಳು ದೊಡ್ಡ ಪ್ರಮಾಣದ ಲಾಭವನ್ನು ಮೆ// ಲಾಜ್ ಎಕ್ಸ್‌ಪೋರ್ಟ್‌ರವರಿಂದ ಪಡೆದು ಸರ್ಕಾರಕ್ಕೆ ಅಂದಾಜು ಒಟ್ಟು ರೂ. 167.00 ಕೋಟಿಗಳ ಆರ್ಥಿಕ ನಷ್ಟವಾಗಿರುವುದು ಕಾನೂನಿನ ಅಡಿಯಲ್ಲಿ ಭಾರತೀಯ ದಂಡ ಸಂಹಿತೆ ಕಲಂ 406,409 ಮತ್ತು 120ಃ ರಡಿಯಲ್ಲಿ ಅಪರಾಧವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಸದರಿಯವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ತನಿಖೆ ನಡೆಸಲು ಕೋರಿದೆ.

Vishnuprasad

ಮುಖ್ಯ ಲೆಕ್ಕ ಪತ್ರಾಧಿಕಾರಿಗಳು
ಹಾಗೂ ಆರ್ಥಿಕ ಸಲಹೆಗಾರರು,
ವೈದ್ಯಕೀಯ ಶಿಕ್ಷಣಾ ನಿರ್ದೇಶನಾಲಯ.

ದಿನಾಂಕ 13.12.2024 ರಂದು ಮಧ್ಯಾಹ್ನ 13.50 ಗಂಟೆಗೆ
ಫಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದು
ಠಾಣಾ ಮೊ.ನಂ 116/24 U/S 403, 406, 409, 120 B IPC
r/w Sec 23 KTPP Act ರೀತ್ಯಾ ಪ್ರಕರಣವನ್ನು ದಾಖಲು ಮಾಡಿರುತ್ತೇನೆ.